RA.ನಂ.21-2022
ಪಿ.ಡಬ್ಲ್ಯೂ -01

**ಸಾಕ್ಷಿಯನ್ನು ದಿಃ 26.09.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ.B.R.R ವಕೀಲರಿಂದ.**

ನಾನು ಎಲ್ಲ ಮೇಲ್ಮನವಿದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಮೇಲ್ಮನವಿದಾರರ ಪೈಕಿ ಒಬ್ಬರು ಮಾತ್ರ ವಿದೇಶದಲ್ಲಿದ್ದಾರೆ. ಅವರು ಅಲ್ಲಿಯೇ 18 ವರ್ಷಗಳಿಂದ ವಾಸಮಾಡುತ್ತಿದ್ದಾರೆ ಸಾಕ್ಷಿ ಮುಂದುವರೆದು ಅವರು ಆಗಾಗ ಬಂದು ಹೋಗುತ್ತಾರೆ ಎಂದು ಹೇಳುತ್ತಾರೆ. ಮೇಲ್ಮನವಿದಾರ 1 ಅವರನ್ನು ನೀವು ಮತ್ತು ಇತರ ಮೇಲ್ಮನವಿದಾರರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವಾಗ ಬೇಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಫೋನ್ ಮಾತನಾಡಿರುತ್ತೇವೆ ಬೇಟಿ ಆಗಿಲ್ಲವೆಂದು ಹೇಳುತ್ತಾರೆ. ಮೇಲ್ಮನವಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 11.5.2022 ರಂದು ನಾನು, ಮೇಲ್ಮನವಿದಾರ 3 ಮತ್ತು 8 ಅವರು ವಕೀಲರುನ್ನು ಬೇಟಿ ಆಗಿರುತ್ತೇವೆ.

ಮೇಲ್ಮನವಿದಾರ 1 ಅವರ ಈಗಿನ ಖಾಯದ ವಿಳಾಸ ಯು.ಎಸ್.ಎ ಆಗಿರುತ್ತದೆ. ಮೇಲ್ಮನವಿದಲ್ಲಿ ಮೇಲ್ಮವಿದಾರ 1 ಅವರ ವಿಳಾಸ ಯು.ಎಸ್.ಎ ಎಂದು ತೋರಿಸಿಲ್ಲ ಅವರು ಬಂದಿದ್ದಲ್ಲಿ ಸದರಿ ವಿಳಾಸ ತೋರಿಸುತ್ತಿದ್ದರು ಎಂದರೆ ಸರಿ. ಮೇಲ್ಮನವಿದಾರ 1 ಅವರು ಮೇಲ್ಮನವಿಗೆ ವಕೀಲರ ಸಮಕ್ಷಮ ಸಹಿ ಮಾಡಿರುವುದಿಲ್ಲ. ಸಾಕ್ಷಿ ಮೊದಲು ದಾವೆ ಸಲ್ಲಿಸಿದಾಗ ಕೋರಿಯರ್ ಮೂಲಕ ಕಳುಹಿಸಿದ್ದರು ಸಹಿ ಮಾಡಲಾಯಿತು ಎಂದು ಹೇಳುತ್ತಾರೆ. ಕೋರಿಯರ್ ಮಾಡಿದವರು ನಮ್ಮ ಪರವಾಗಿ ಯಾರು ಮಾಡಿರುತ್ತಾರೆಂದು ಗೊತ್ತಿಲ್ಲ. ಮೇಲ್ಮನವಿದಾರ 1 ಅವರು ವಿದೇಶದಲ್ಲಿರುವ ಕಾರಣ ಈ ಮೇಲ್ಮನವಿಗೆ ಮಾಹಿತಿ ನೀಡಿಲ್ಲವೆಂದರೆ ಸಾಕ್ಷಿ ಫೋನ್ ನಲ್ಲಿ ಮಾಹಿತಿ ನೀಡಿದ್ದಾರೆಂದು ಹೇಳುತ್ತಾರೆ. ನಾನು ಈ ಪ್ರಕರಣವನ್ನು ನಿಗದಿತ ಸಮಯದಲ್ಲಿ ಸಲ್ಲಿಸಲು ಕಾರಣ ಏನು ಎಂದು ಅರ್ಜಿಯಲ್ಲಿ ತೋಸಿದ್ದೀರಾ ಎಂದರೆ ಸಾಕ್ಷಿ ಕರೋಣಾ ಇದ್ದ ಕಾರಣ ಮೇಲ್ಮನವಿ ಸಲ್ಲಿಸಲು ತಡವಾಗಿರುತ್ತದೆಂದು ತೋರಿಸಿರುತ್ತೆನೆಂದು ಹೇಳುತ್ತಾರೆ.

ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನಗೆ ಆರೋಗ್ಯ ಸರಿ ಇರಲಿಲ್ಲವೆಂದು ಬರೆಸಿದ್ದು ನನಗೆ ಯಾವುದೇ ಕಾಯಿಲೆ ಇರಲಿಲ್ಲ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನಗೆ ಆರೋಗ್ಯ ಸರಿ ಇರುವುದಿಲ್ಲವೆಂದು ಬರೆಸಿರುವುದಿಲ್ಲ. ಎದುರುದಾರರ 6 ಅವರು ವಿಳಾಸವನ್ನು ರಾಜಾಜಿನಗರವೆಂದು ನೀಡಿರುತ್ತೇನೆ. 2022 ರಲ್ಲಿ ಎದುರುದಾರರ 6 ಅವರ ವಿಳಾಸ ರಾಜಾಜಿನಗರ ಆಗಿರುವುದಿಲ್ಲ. ಯೋಗಿಂದ್ರರಾಜು ಎಂ.ಬಿ. ವಕೀಲನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಬೇಟಿ ಆಗಿರುತ್ತೇನೆ. ಎದುರುದಾರರ 6 ಅವರ ವಿದೇಶದ ವಿಳಾಸವನ್ನು ಮೇಲ್ಮನವಿಯಲ್ಲಿ ಮತ್ತು ಅವರಿಗೆ ನೀಡಿರುವ ನೋಟಿಸನಲ್ಲಿ ನೀಡಿರುವುದಿಲ್ಲವೆಂದರೆ ಸಾಕ್ಷಿ ಗೊತ್ತೀಲ್ಲವೆಂದು ಹೇಳುತ್ತಾರೆ.

2022-23 ರಲ್ಲಿ ನನಗೆ ಗೊತ್ತಿರುವ ಹಾಗೆ ಎದುರುದಾರರ 6 ಅವರು ಭಾರತದಲ್ಲಿ ಇರಲಿಲ್ಲ. ಇತರೇ ಮೇಲ್ಮನವಿದಾರರಿಗೆ ಯಾವುದೇ ಕಾಯಿಲೆ ಮತ್ತು ಆಂತರಿಕ ತೊಂದರೆ ಮೇಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ. ನಾವು ನೇಮಿಸಿದ ವಕೀಲರು ಬೆಂಗಳೂರಿನವರು ಆಗಿದ್ದು ನಾವು ಸಹ ಬೆಂಗಳೂರಿನವರು ಆಗಿದ್ದು ಅವರನ್ನು ಬೇಟಿ ಆಗಲು ಯಾವುದೇ ತೊಂದರೆ ಇರಲಿಲ್ಲ. ಕೆಳ ನ್ಯಾಯಾಲಯದ ಆದೇಶದ ನಂತರ ಮತ್ತು ಮೇಲ್ಮನವಿಯ ಅವದಿ ಮುಗಿದ ನಂತರ ದಾವಾ ಸ್ವತ್ತು ಮಾರಾಟ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮದ್ಯಂತರ ಅರ್ಜಿಯಲ್ಲಿ ನೀಡಿರುವ ಕಾರಣಗಳು ಸಕಾರಣಗಳು ಆಗಿರುವುದಿಲ್ಲ ಈ ಅರ್ಜಿಯನ್ನು ಪುರಸ್ಕರಿಸುವ ಕಾರಣಗಳು ಆಗಿರುವುದಿಲ್ಲವೆಂದರೆ ಸರಿಯಲ್ಲ. ಆದ ಕಾರಣ ಯಾವುದೇ ಸಕಾರಣಗಳು ಇಲ್ಲದೇ ಸಲ್ಲಿಸಿರುವ ಕಾರಣ ಈ ಮೇಲ್ಮನವಿ ವಜಾ ಆಗಿದ್ದಲ್ಲಿ ಯಾವುದೇ ತೊಂದರೆ ಆಗುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ, ಕುಣಿಗಲ್